ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 146-152
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ನಾ.ಮೊಗಸಾಲೆಯವರ ಕವಿತೆಗಳಲ್ಲಿ ಕರಾವಳಿಯ ಪ್ರಕೃತಿ ದರ್ಶನ

**ಚಂದ್ರನಾಯಕ ಪಿ ಆರ್[1] ಮತ್ತು ಮತ್ತು ಡಾ. ಆಶಾಕುಮಾರಿ ಬಿ.ಪಿ[2]**

[1]ಸಂಶೋಧನಾ ವಿದ್ಯಾರ್ಥಿ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

[2]ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***

*ಮನುಷ್ಯನು ಪ್ರಕೃತಿಯೊಂದಿಗೆ ಒಡನಾಟವನ್ನು ಕಳಚಿಕೊಳ್ಳುವ ಪ್ರಯತ್ನಗಳೆಲ್ಲವೂ ಆತನನ್ನ ವಿನಾಶದಂಚಿಗೆ ತಂದು ನಿಲ್ಲಿಸುತ್ತವೆ. ಅಸ್ತಿತ್ವದ ಪ್ರಶ್ನೆಯಾಗಿ, ದೈವದತ್ತ ಸಂಕೇತವಾಗಿ ಹಾಗೂ ಜೀವನಾಧಾರವಾಗಿ ಮನುಷ್ಯನಿಗೆ ಪ್ರಕೃತಿಯ ಸಂಬಂಧ ಅನಿವಾರ್ಯವಾಗಿದೆ. ಪ್ರಕೃತಿಯನ್ನು ಆರಾಧಿಸುವ ಆಸ್ವಾಧಿಸುವ ಸಂವೇದನಾಶೀಲ ಕವಿ ಮನಸ್ಸುಗಳು ನಿಸರ್ಗದೊಂದಿಗೆ ಸಾಮರಸ್ಯದಿಂದ, ಸಹಾನುಭೂತಿಯಿಂದ ಹೆಜ್ಜೆ ಹಾಕುವ ಪ್ರಜ್ಞೆಯುಳ್ಳವರಾಗಿರುತ್ತಾರೆ. ಕನ್ನಡ ಕಾವ್ಯಲೋಕದ ಆದಿಕವಿಗಳಾದಂತಹ ವಾಲ್ಮೀಕಿ, ಪಂಪ, ಜನ್ನ, ನಾಗಚಂದ್ರರಂತಹ ಅನೇಕ ಕವಿಗಳು ತಮ್ಮ ಅಭಿಜಾತ ಪ್ರತಿಭೆಯನ್ನು ಪ್ರಾಕೃತಿಕ ಸಂಪತ್ತಿನ (ಸಮುದ್ರ, ಋತು, ಪರ್ವತ) ವರ್ಣನೆಗಳಲ್ಲಿ ಉಜ್ವಲವಾಗಿ ತೋರ್ಪಡಿಸಿದ್ದಾರೆ. ಬೃಹತ್ತಾದ ನಿಸರ್ಗ ನೋಟದಲ್ಲಿ 'ಮಗು'ವಾಗಿರುವ ಮನುಷ್ಯ ಪ್ರಕೃತಿಯ ಭೌತಿಕ ಮತ್ತು ಆಧ್ಯಾತ್ಮಿಕ ದೃಷ್ಟಿಗಳನ್ನು ಕಾಣುವ ಪ್ರೌಢಿಮೆಯನ್ನು ಬೆಳೆಸಿಕೊಳ್ಳುತ್ತಾನೆ. ಕನ್ನಡ ಕವಿಗಳು ಪ್ರಕೃತಿಯನ್ನು ಕೇವಲ ಭೌಗೋಳಿಕ ವಸ್ತುವಾಗಿ ನೋಡದೆ, ಭಗವಂತನ ಅನುಸಂಧಾನದ ದಿವ್ಯಭಾವವೆಂದು ಪರಿಭಾವಿಸಿದ್ದಾರೆ. ಪ್ರಕೃತಿಯ ಆರಾಧನೆಯ ವಿಷಯದಲ್ಲಿ 'ಕನ್ನಡದ ವರ್ಡ್ಸ್‌ವರ್ತ್' ಎಂದೇ ಪ್ರಸಿದ್ಧವಾಗಿರುವ ಕುವೆಂಪುರವರು ಪ್ರಕೃತಿಯೊಂದಿಗೆ ಬಾಳುವುದೇ ನಿಜವಾದ ಗುರಿ ಎಂಬಂತೆ ಪ್ರಕೃತಿಗೀತೆಗಳ ರಚಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ನಾ.ಮೊಗಸಾಲೆಯವರ ಕವಿತೆಗಳಲ್ಲಿ ಕರಾವಳಿಯ ಪ್ರಕೃತಿ ದರ್ಶನವನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ನಾ.ಮೊಗಸಾಲೆ, ಕನ್ನಡ ಸಾಹಿತ್ಯ, ನೀಲ ಆಕಾಶ, ಕರಾವಳಿ, ಪ್ರಕೃತಿ ದರ್ಶನ.*

## ಪೀಠಿಕೆ

ಮಾನವ ಮತ್ತು ಪ್ರಕೃತಿಯ ಸಂಬಂಧವನ್ನು ವೈಭವೀಕರಣಕ್ಕೆ ಕರೆದೊಯ್ಯದೆ 'ಇಹದ ಪರಿಮಳದ ಹಾದಿ'ಯೇ ನಿಸರ್ಗವೆಂಬಂತೆ ಕಾವ್ಯ ರಚಿಸಿದ ಕೆ.ಎಸ್.ನರಸಿಂಹಸ್ವಾಮಿಯವರು ಕೂಡ ಪ್ರಕೃತಿ ಜೊತೆಗಿನ ಮಾನವ ಸಂಬಂಧಗಳನ್ನು ಒಲುಮೆಯಲ್ಲಿ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಪ್ರಕೃತಿಯೊಂದಿಗೆ ಮನುಷ್ಯ ವರ್ತಿಸಬೇಕಾದ ರೀತಿ–ನೀತಿಗಳು, ಕಲಿಯಬೇಕಾದ ಪಾಠಗಳು, ನಿಸರ್ಗದೊಂದಿಗಿನ ಸಹಸಂಬಂಧಗಳ ಬಗೆಗೆ ಆಧುನಿಕ ಕನ್ನಡ ಕಾವ್ಯ ಪರಂಪರೆಯು ನಿರಂತರವಾಗಿ ಧ್ಯಾನಿಸುತ್ತ ಬಂದಿದೆ.

ಕರಾವಳಿ ಭಾಗದ ಕವಿಗಳು ತಮ್ಮ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಪ್ರಧಾನವಾಗಿರಿಸಿಕೊಂಡು ಪ್ರಕೃತಿಯನ್ನು ಎದುರುಗೊಳ್ಳುತ್ತಾರೆ. ಭಾಷೆ ಮತ್ತು ಭೌಗೋಳಿಕ ಪ್ರದೇಶವನ್ನು ಕೇಂದ್ರವಾಗಿರಿಸಿಕೊಂಡು

***Please cite this article as:*** ಚಂದ್ರನಾಯಕ ಪಿ ಆರ್ ಮತ್ತು ಆಶಾಕುಮಾರಿ ಬಿ.ಪಿ. (2024). ನಾ.ಮೊಗಸಾಲೆಯವರ ಕವಿತೆಗಳಲ್ಲಿ ಕರಾವಳಿಯ ಪ್ರಕೃತಿ ದರ್ಶನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 146–152.

ಗುರುತಿಸಿಕೊಳ್ಳುವ ಮೈಸೂರು ಮತ್ತು ಧಾರವಾಡ ಪ್ರದೇಶದ ಕವಿಗಳಿಗಿಂತ, 'ಕರಾವಳಿ' ಎನ್ನುವ ಪ್ರಕೃತಿಯ ಸಂಪತ್ತನ್ನು ಕೇಂದ್ರವಾಗಿರಿಸಿಕೊಂಡು ಗುರುತಿಸಿಕೊಳ್ಳುವ ದಕ್ಷಿಣ ಕನ್ನಡ ಕವಿಗಳ ನಿಸರ್ಗ ಪ್ರೇಮ ವಿಭಿನ್ನವಾದದ್ದು. ನಗರೀಕರಣದ ಅಪಾಯಗಳನ್ನಾಗಲಿ, ಕೈಗಾರೀಕರಣದ ವಿಕೋಪವನ್ನಾಗಲಿ ಎದುರಿಸದ ದಕ್ಷಿಣ ಕನ್ನಡ ನೆಲದ ಸಿರಿಯನ್ನು ಬಹುದೊಡ್ಡ ಪಂಡಿತವರ್ಗವೇ ತಮ್ಮ ಕವಿತೆಯಲ್ಲಿ ಚೈತನ್ಯ ಸ್ವರೂಪಿಯಾಗಿ ಒಡಮೂಡಿಸಿದ್ದಾರೆ. ಪರಂಪರೆ ಮತ್ತು ಆಧುನಿಕತೆಯ ಸಮನ್ವಯತೆಯನ್ನು ಸಾಧಿಸಿದ ಪಂಜೆಮಂಗೇಶರಾಯರು, ಗೋವಿಂದ ಪೈ, ಸೇಡಿಯಾಪು ಕೃಷ್ಣಭಟ್ಟರು, ಶಂಕರಭಟ್ಟರಂತಹ ಹಿರಿಯ ಕವಿಗಳು ತಮ್ಮದೇಯಾದಂತಹ 'ಕರಾವಳಿಯ ಕಾವ್ಯ ಮಾರ್ಗ'ವನ್ನ ಹುಟ್ಟು ಹಾಕಿದ್ದಾರೆ. ಬಹುದೊಡ್ಡ ಹೆದ್ದಾರಿಯನ್ನೇ ಬೆನ್ನಿಗಿರಿಸಿಕೊಂಡಿದ್ದಂತಹ 'ನಾ.ಮೊಗಸಾಲೆ' ಅವರು ನಿಸರ್ಗವನ್ನು ಕಲಾತ್ಮಕವಾಗಿಯೂ, ಬೌದ್ಧಿಕ ಗ್ರಹಿಕೆಯ ಭಾಗವಾಗಿಯೂ, ಆಧ್ಯಾತ್ಮದ ರೂಪವಾಗಿಯೂ ಪರಿಭಾವಿಸುವುದನ್ನು ಗುರುತಿಸಬಹುದು. ಕರಾವಳಿಯ ನಿಸರ್ಗವೆಂದರೆ ಮರ, ಗಿಡ, ಕಾಡು, ಪ್ರಾಣಿ, ಪಕ್ಷಿಗಳಲ್ಲ. ದಕ್ಷಿಣ ಕನ್ನಡ ನೆಲವನ್ನು ಸುಂದರಗೊಳಿಸುವುದು ಅಲ್ಲಿಯ ಮಳೆ ಮತ್ತು ಕಡಲು. ಕರಾವಳಿಯ ಮಳೆಯನ್ನು ವರ್ಣಿಸುವ ಪಂಜೆಯವರ 'ತೆಂಕಣ ಗಾಳಿಯಾಟ'ದ ಮಳೆ ಆಟವನ್ನು ಅವರ ಪದಗಳಲ್ಲಿಯೇ ಅನುಭವಿಸಬಹುದು.

*'ಬರಲಿದೆ! ಆಹಹಾ! ದೂರದಿ ಬರಲಿದೆ*
*ಬುಸುಗುಟ್ಟುವ ಪಾತಾಳದ ಹಾವೋ?*
*ಹಸಿವಿನ ಭೂತದ ಕೂಯುವ ಕರಾವೋ?*
*ಹೊಸತಿದು! ಕಾಲನ ಕೋಣನ, ಓ! ಓ!*
*ಉಸುರಿನ ಸುಯ್ಯೋ? ಸೂಸೂಕರಿಸುತ*
*ಬರುವುದು! ಬರಬರ ಭರದಲಿ ಬರುವುದು!*
*ಬೊಬ್ಬೆಯ ಹಬ್ಬಿಸಿ ಒಂದೇ ಬಾರಿಗೆ*
*ಉಬ್ಬರ ಎಬ್ಬಿಸಿ ಕಡಲ ನೀರಿಗೆ*
*ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ*
*ಅಬ್ಬರದಲಿ ಭೋರ್–ಭೋರನೆ ಗುಮ್ಮಿಸಿ'*[1]

ಪಂಜೆಯವರ ಈ ದೃಶ್ಯ ಕಾವ್ಯ ಕರಾವಳಿಯ ಮಳೆಯ ನರ್ತನವನ್ನು ಕಣ್ಣೆದುರಿನ ದೃಶ್ಯವೆಂಬಂತೆ ಚಿತ್ರಿಸಿದೆ. 'ಕಡಲು' ಮತ್ತು ಮಳೆಯ ವೈಭವಯುತವಾದ ಚಿತ್ರಣವನ್ನ ಪಂಜೆಯವರಂತೆ ಅನೇಕ ಕವಿಗಳು ದೃಶ್ಯೀಕರಿಸುತ್ತ ಕರಾವಳಿಯ ನಿಸರ್ಗವನ್ನು ಕಾವ್ಯದಲ್ಲಿ ನಿರೂಪಿಸಿದ್ದಾರೆ.

ನವ್ಯ ಕಾವ್ಯದ ಉತ್ತುಂಗ ಸ್ಥಿತಿಯಲ್ಲಿ ಕರಾವಳಿಯ ಕಾಂತಾವರವು ನಾ.ಮೊಗಸಾಲೆ ಅವರ ಕಾವ್ಯಕ್ಕೆ ಕಡಲನ್ನು ಬೌದ್ಧಿಕ ನೆಲೆಯ ಮೂಲಕ ಪ್ರವೇಶಿಸಲು ಅನುವು ಮಾಡಿಕೊಟ್ಟಿದೆ. "ಪ್ರಕೃತಿ ದರ್ಶನದಲ್ಲಿ ನಾವು ಹುಡುಕ ಬೇಕಾದದ್ದು ಹೊಸ ನಿಸರ್ಗವನ್ನಲ್ಲ, ಹೊಸ ಮನುಷ್ಯನನ್ನು"[2] ಎನ್ನುವ ಡಿ.ಆರ್.ನಾಗರಾಜ್ ಅವರ ಮಾತಲ್ಲಿ ಪ್ರಕೃತಿಯ ಮೂಲಕ ಮನುಷ್ಯ ಕಂಡುಕೊಳ್ಳಬೇಕಾದ ಜೀವನದ ವಿನೂತನ ಹಾದಿಗಳ ಆವಿಷ್ಕಾರವಿದೆ. ನಾ.ಮೊಗಸಾಲೆ ಅವರ ಕಾವ್ಯದ ಮೊದಲ ಹೆಜ್ಜೆಗಳು ಮನುಷ್ಯನನ್ನು ಮನುಷ್ಯನನ್ನಾಗಿ, ನಿಸರ್ಗವನ್ನು ನಿಸರ್ಗವನ್ನಾಗಿ ನೋಡುವ ವಾಸ್ತವತೆಯ ನೆಲೆಯನ್ನು ಆಧರಿಸಿದ್ದವು. ನಿಸರ್ಗದಲ್ಲಿ ಹೊಸ ಮನುಷ್ಯನನ್ನು ಹುಡುಕ ಹೊರಟ ಮೊಗಸಾಲೆಯವರಿಗೆ ಪ್ರಕೃತಿಯನ್ನು ಮನಷ್ಯನಿಂದ, ಮನುಷ್ಯನನ್ನು ಪ್ರಕೃತಿಯಿಂದ ದೂರವಿರಿಸಿ ಅಥವಾ ಅಂತರವಿರಿಸಿ ಕಾಣುವ ವರ್ತಮಾನದ ದೃಷ್ಟಿಕೋನವಿತ್ತು. ತಮ್ಮ ಕಾವ್ಯದ ಅನನ್ಯತೆಯನ್ನು ಕರಾವಳಿಯ ಪ್ರಾಕೃತಿಕ ರೂಪಕಗಳ ಮೂಲಕ ನಿರೂಪಿಸುವ ಕವಿತೆ 'ಅನ್ವೇಷಣೆ'ಯ ಮೊಗಸಾಲೆಯವರ ಪ್ರಕೃತಿಯ ಗ್ರಹಿಕೆಗಳನ್ನು ಪರಿಚಯಿಸುತ್ತದೆ.

---

[1]. ಜನಾರ್ಧನ ಭಟ್, ಬಿ. *ಕರಾವಳಿಯ ಕವಿರಾಜಮಾರ್ಗ*. ಪುಟ. 29–30

[2]. ನಾಗರಾಜ್, ಡಿ.ಆರ್. *ಶಕ್ತಿ ಶಾರದೆಯ ಮೇಳ*. ಪುಟ.84

***'ನಾನು ಬರೆಯಲು ಪ್ರಾರಂಭಿಸಿದಾಗಿನ ನನ್ನ ಪದ್ಯಗಳು***

***ಕರಾವಳಿ ಕಡಲ ಪಕ್ಕದಲ್ಲಿ ಉದ್ದಕ್ಕೂ ಮಲಗಿದ ಹಾಗೆ***

***ಬಿಚ್ಚಿಕೊಳ್ಳಬೇಕು ತನ್ನಿಂತಾನೆ***

***ಸ್ವರೂಪಕ್ಕೆ ಮಾತ್ರ ಸೀಮೆ ಪಶ್ಚಿಮಘಟ್ಟ ಹಾಗೂ ಕಡಲು***

***ಎದುರು ಬದುರು ಇದಿರು***

***ಇರಬಾರದೆಂಬ ಸಿದ್ಧಾಂತ ಬದ್ಧ ವ್ಯಾಕರಣ***

***ಬಯಲು ಸೀಮೆಯ ಜನ***

***ಕರಾವಳಿ ನೋಡದೆ ಮಾಡಿದ ವರ್ಣನೆಯಂತೆ'***[3]

ಪ್ರಕೃತಿಯೊಂದಿಗೆ ಕಾವ್ಯವನ್ನು ಅಥವಾ ಕಾವ್ಯದೊಂದಿಗೆ ಪ್ರಕೃತಿಯನ್ನು ನಿರೂಪಿಸುವ ವಿಶಿಷ್ಟ ಮಾದರಿ ಕವಿತೆ ಇದಾಗಿದೆ. ತಮ್ಮ ಕಾವ್ಯದ ತುಡಿತ ಮತ್ತು ಗ್ರಹಿಕೆಗಳನ್ನು ಕವಿ ಇಲ್ಲಿ ಸ್ಪಷ್ಟಪಡಿಸಿದ್ದಾರೆ. 'ಕರಾವಳಿ ಕಡಲ ಪಕ್ಕ ಮಲಗುವ' ಮುಕ್ತನಗ್ನತೆ ನನ್ನ ಕಾವ್ಯಕ್ಕಿದೆ ಎನ್ನುವ ಅರ್ಥವನ್ನು ಈ ಸಾಲುಗಳು ಸಂಕೇತಿಸುತ್ತಿವೆ. ನೈಜತೆಗೆ ಸಂಬಂಧಿಸಿದಂತೆ, ತಾಜಾತನಕ್ಕೆ ಸಂಬಂಧಿಸಿದಂತೆ ತಮ್ಮ ಕಾವ್ಯದ ವಿಶಿಷ್ಟತೆಯನ್ನು ಮೊಗಸಾಲೆ ಅವರು ಕರಾವಳಿಯ ಕಡಲ ಬಿಚ್ಚು ಮನಸ್ಸಿಗೆ ರೂಪಾತ್ಮಕವಾಗಿ ಸಮೀಕರಿಸಿದ್ದಾರೆ. ಮೊಗಸಾಲೆಯವರ ಇಡೀ ಕಾವ್ಯದ ಜೀವಾಳವಿರುವ ಯಾವುದೇ ಸಿದ್ಧಾಂತಕ್ಕೆ ಕಟ್ಟುಬೀಳದೆ ಹೊರಗುಳಿಯುವುದರಿಂದ. ಹಾಗಾಗಿ ತಮ್ಮ ಕಾವ್ಯದ ಸ್ವರೂಪ ಪಶ್ಚಿಮಘಟ್ಟ ಹಾಗೂ ಕಡಲಿನಂತೆ ಮುಕ್ತವಾಗಿದೆ ಹೊರತು ಯಾವುದೇ ಛಂದಸ್ಸು ಮತ್ತು ಸಿದ್ಧಾಂತಕ್ಕೆ ಒಳಗಾಗಿಲ್ಲವೆಂಬ ಆತ್ಮವಿಶ್ವಾಸವನ್ನು ಕವಿ ವ್ಯಕ್ತಪಡಿಸಿದ್ದಾರೆ. ಪ್ರಕೃತಿಯಲ್ಲಿ ಮನುಷ್ಯನನ್ನ ಹುಡುಕ ಹೊರಟ ಕವಿಗಳಂತೆ, ಅದೇ ನಿಸರ್ಗದಲ್ಲಿ ಕಾವ್ಯ ಸ್ವರೂಪವನ್ನು ಕಟ್ಟಿಕೊಡುವ ವಿಭಿನ್ನ ಶೈಲಿ ಮೊಗಸಾಲೆ ಅವರದು. ಡಾ.ಕರುಣಾಕರಶೆಟ್ಟಿ ಪಣಿಯೂರು ಅವರು ಮೊಗಸಾಲೆಯವರ ಪ್ರಕೃತಿ ಕವಿತೆಗಳ ಬಗೆಗೆ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಇಲ್ಲಿ ಹಂಚಿಕೊಳ್ಳಬಹುದು. "ನಾ.ಮೊಗಸಾಲೆಯವರ ಕವನಗಳು ಪ್ರಕೃತಿಯೊಂದಿಗೆ ನೇರವಾಗಿ ಮುಖಾಮುಖಿಯಾಗುವಂತೆ ಕಂಡುಬರುವುದಿಲ್ಲ ವಾದರೂ ಅವುಗಳು ರೂಪುಗೊಂಡಿರುವುದು ಪ್ರಕೃತಿಯ ಮೂಲನೆಲೆಗಳಾಗಿರುವ ನದಿ, ಮರ, ಹೂವು, ಗಿಡ, ಚಂದ್ರ, ಹಕ್ಕಿ, ಸೂರ್ಯ, ಬೆಳದಿಂಗಳಲ್ಲಿ, ಹರಿಯುವ ನೀರಿನಲ್ಲಿ, ಮಿಂಚಿನಲ್ಲಿ"[4] ಈ ಎಲ್ಲಾ ಬೆರಗುಗಳನ್ನು ವಿಚಾರಶೀಲತೆಯಿಂದ ನೋಡುವ ಬೌದ್ಧಿಕನೆಲೆ ಮೊಗಸಾಲೆಯವರದಾಗಿದೆ..

***"ನನ್ನಮ್ಮನ ತುರುಬೆಂದರೆ ನಮ್ಮನೆ ಹಿಂದಿನ ಕಾಡು***

***ಅಪ್ಪ ಇರುವಷ್ಟು ದಿವಸ ಮೂಡಿದ ಹಾಗೆ ಕೋಡು***

***ನಮ್ಮನೆ ಹಿಂದಿನ ಕಾಡಿನಲ್ಲೂ ಅಮ್ಮನ ತುರುಬಿನಲ್ಲೂ***

***ಎಂಥೆಂಥಾ ಹೂಗಳು ಅಂತೀರಿ!"*** [5]

ಮೊಗಸಾಲೆಯವರಿಗೆ ಕಾಡು ತುಂಬಾ ದೂರದ ಪ್ರದೇಶವಲ್ಲ. ಮನೆ ಹಿಂದೆಯೇ ಇದೆ. ಆದರೆ ಕವಿ ಮನೆ ಹಿಂದಿನ ಕಾಡನ್ನು, ಕಣ್ಮುಂದಿನ ಅಮ್ಮನ 'ತುರುಬಿ'ನಲ್ಲಿ ಕಾಣುತ್ತಿದ್ದಾರೆ. ಕಾಡಿನಲ್ಲಿರುವಷ್ಟೇ ವೈವಿಧ್ಯವಾದ ಹೂಗಳು, ಕವಿಯ ಅಮ್ಮನ ತುರುಬಿನಲ್ಲಿಯೂ ಕಂಗೊಳಿಸುತ್ತಿದೆ. ಕವಿಯ ಪಾಲಿಗೆ ತಾಯಿಯ ದಟ್ಟವಾದ ಮುಡಿ ಮತ್ತು ದಟ್ಟರಾಣ್ಯವು ಒಂದೇ. ಪರೋಕ್ಷವಾಗಿ ಅಮ್ಮನ ತುರುಬಿನ ಹೂವಿನ ಸಂಭ್ರಮಕ್ಕೆ ಅಪ್ಪನೊಂದಿಗಿನ ವೈವಾಹಿಕ ಜೀವನವೂ ಕಾರಣವಾಗಿದೆ. ಆದರೆ ಅಪ್ಪ ಸತ್ತ ನಂತರ 'ಕಾಡಿನ ಬೆಂಕಿ, ಕಾಷ್ಠದ ಬೆಳಕಿನಲ್ಲಿ ಅಮ್ಮನ ಮುಖ'ವೆನ್ನುವ ಸಾಲು ಅಮ್ಮನ ವೈಧವ್ಯವನ್ನು ಸಾಂಕೇತಿಸುತ್ತದೆ. 'ಕಾಡಿಗೆ ಬೆಂಕಿ' ಎನ್ನುವ ಶಬ್ದ ತುರುಬಿಲ್ಲದ ಅಮ್ಮನ ಬೋಳುತಲೆಯನ್ನು,ವಿಧವೆಯ ಅಸಹನೀಯತೆಯನ್ನು ಸೂಚಿಸುತ್ತದೆ. ನಾ.ಮೊಗಸಾಲೆಯವರಿಗೆ 'ಕಾಡು' ಸೌಂದರ್ಯೋಪಾಸನವಾಗಿ ಕಾಣುವುದು ಅಮ್ಮನ

[3]. ಮೊಗಸಾಲೆ, ನಾ. *ನೀಲ ಆಕಾಶ.* ಪುಟ.3

[4]. ಜನಾರ್ಧನ್ ಭಟ್ ಬಿ., (ಸಂ.). *ಮೊಗಸಾಲೆಗೆ ಪ್ರವೇಶ.* ಪುಟ. 69

[5]. ಮೊಗಸಾಲೆ, ನಾ. *ಪೂರ್ವೋಕ್ತ.* ಪುಟ–11

ತುರುಬಿನಲ್ಲಿ ಮಾತ್ರ. ನಿಸರ್ಗವನ್ನು ಜೀವನ ಪ್ರೀತಿಯ ಸಂಕೇತವಾಗಿ ಸ್ವೀಕರಿಸುವ ಮೊಗಸಾಲೆ ಅವರ ಕಾವ್ಯಗುಣವು 'ಮಣ್ಣಿನಲ್ಲಿ ಹುಟ್ಟಿ ಆಕಾಶದತ್ತಲೇ ಕುಡಿ'ಯೊಡೆಯುವ ಕಲಾತ್ಮಕತೆಯನ್ನು ಸಿದ್ಧಿಸಿಕೊಂಡಿದೆ. ನಿಸರ್ಗದ ಸಹಜ ಸೌಂದರ್ಯವನ್ನು ನಿಯಂತ್ರಿಸಲು ಹೊರಡುವ ಮನುಷ್ಯನ ಭ್ರಮೆಗಳನ್ನು 'ಆರ್ಕಿಡ್' ಎನ್ನುವ ಕವಿತೆಯಲ್ಲಿ ಅಭಿವ್ಯಕ್ತಿಸಲಾಗಿದೆ. 'ದ್ರೌಪದಿ ಹೂ' ಎಂದೆನಿಸಿಕೊಂಡಿರುವ 'ಆರ್ಕಿಡ್' ತನ್ನ ಸಹಜ ಸೌಂದರ್ಯದಿಂದ ಮರದ ಕೊಂಬೆಗಳ ಮೇಲೆ ಅರಳುತ್ತದೆ. ಆದರೆ ಮನುಷ್ಯ ಪ್ರಕೃತಿಯನ್ನು ತನ್ನ ಅಳತೆಗೆ ಬಗ್ಗಿಸುವ ಸಲುವಾಗಿ 'ಬೊನ್ಸಾಯಿ' ಎನ್ನುವ ಮರಗಳನ್ನು ಕುಬ್ಜಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗುವುದರ ಬಗೆಗೆ ಕವಿಗೆ ಬೇಸರವಿದೆ. ಹಾಗಾಗಿಯೇ ಪ್ರಕೃತಿಯನ್ನು ಪ್ರಕೃತಿಯ ಪಾಡಿಗೆ ಬಿಟ್ಟು ಮನುಷ್ಯ ಅಂತರವಿರಬೇಕೆಂಬ ನಿಲುವನ್ನು ಕವಿ ವ್ಯಕ್ತಪಡಿಸಿದ್ದಾರೆ. ಕಾಂತಾವರದ ಮಳೆಗಾಲವನ್ನು ನೆನಪಿಸಿಕೊಳ್ಳುವ ಕವಿ ಕರಾವಳಿಯ ಪ್ರಕೃತಿಯಲ್ಲಿ ಕಾಯಕಜೀವಿಗಳನ್ನು ಕಾಣುವರು.

***'ಕಾಂತಾವರದ ಮಳೆಗಾಲ***
***ಅರರೇ!***
***ಬಿಡಿಸಿದ ಕೊಡೆಗಳೇ ಮಕ್ಕಳಾದರೆ ಹೇಗೆ ಎಂಬಂತೆ***
***ಸ್ವಾತಂತ್ರ್ಯೋತ್ಸವಕ್ಕೆ ಶಾಲಾಮಕ್ಕಳು***
***ಹೊರಟ ಹಾಗೆ ಮೆರವಣಿಗೆ!*** [6]

ಮಳೆಗಾಲದ ಸಂಭ್ರಮವನ್ನು ಮಕ್ಕಳ ಸ್ವಾತಂತ್ರ್ಯದ ನಡಿಗೆಯಲ್ಲಿ ಗುರುತಿಸುವ ವಿಶಿಷ್ಟ ಶೈಲಿ ಮೊಗಸಾಲೆಯವರದ್ದು. ಕರಾವಳಿಯಲ್ಲಿ ಮಳೆಗಾಲವೆಂದರೆ ಪಂಜೆ ಅವರು ಚಿತ್ರಿಸುವಂತೆ (ತೆಂಕಣ ಗಾಳಿಯಾಟ) ಅಬ್ಬರ, ಬೊಬ್ಬರ, ಉಬ್ಬರದ ವೈಭವವಿರುತ್ತದೆ. ಆದರೆ ಮೊಗಸಾಲೆ ಅವರು ಕಾಂತಾವರದ ಶಾಂತತೆಯನ್ನು ಸಾಂಕೇತಿಸಿದ್ದಾರೆ. ಮಳೆಯ ಮೂಲಕ ದುಡಿಯುವ ಅಜ್ಜನ ಜೀವನೋತ್ಸಾಹವನ್ನು, ಮೀನುಗಳನ್ನು ಹಿಡಿದು ತಿನ್ನುತ್ತಿರುವ ಕೊಕ್ಕರೆಗಳನ್ನು ನೋಡುವ ಅಜ್ಜಿಯ ತನ್ಮಯತೆಯನ್ನು ಕವಿ ಸ್ಮರಿಸಿದ್ದಾರೆ. ಇಡೀ ಬಯಲು ತನ್ನ ಬೆತ್ತಲೆಯನ್ನು ಮುಚ್ಚಿಕೊಳ್ಳಲು ಹಸಿರಿನ ಆ ಲಿಂಗಕ್ಕೆ ಹಾತೊರೆಯುತ್ತದೆ ಎನ್ನುವ ಕಲ್ಪನೆಯಲ್ಲಿ ಕಾಂತಾವರದ ನಿಸರ್ಗ ವೈಭವವನ್ನು ಕಣ್ತುಂಬಿಕೊಳ್ಳಬಹುದು. ಪ್ರಕೃತಿಯಲ್ಲಿ ಮನುಷ್ಯನನ್ನ, ಮನುಷ್ಯನೊಳಗಿನ ಪ್ರಕೃತಿಯನ್ನು ಕಾಣುವ ವೈಶಿಷ್ಟ್ಯಪೂರ್ಣ ದೃಷ್ಟಿ ಮೊಗಸಾಲೆಯವರ ಕಾವ್ಯಕ್ಕಿದೆ. ನಿಸರ್ಗವು ಮನುಷ್ಯರನ್ನ ಕಾರ್ಯ ಪ್ರವೃತ್ತಗೊಳಿಸುವ ತುಡಿತಗಳನ್ನು ಒಳಗೊಂಡಿರುತ್ತದೆ ಎನ್ನುವ ಆಶಾವಾದಿತನವನ್ನ 'ಕರಾವಳಿಯ ಮಳೆಗಾಲದ ಮುಂಜಾನೆ' ಎನ್ನುವ ಕವಿತೆಯಲ್ಲಿ ಗುರುತಿಸಬಹುದು. ನವೋದಯ ಯುಗದ ಕವಿಗಳು ಪ್ರಕೃತಿಯನ್ನು ನೋಡಲು ಹೊರಡುವುದು ಮತ್ತು ಪ್ರಕೃತಿಯೊಂದಿಗೆ ಅನುಭೂತಿಯನ್ನು ಸಾಧಿಸಿ ಹಿಂದಿರುಗುವುದರಲ್ಲಿ ಕವಿ ಮಾತ್ರ ಗೋಚರಿಸುತ್ತಾರೆ. ಅಂದರೆ ಕವಿ ಪ್ರಕೃತಿಯೊಂದಿಗೆ ಮುಖಾಮುಖಿಯಾಗಿ ದಕ್ಕಿಸಿಕೊಂಡ ಅಮೂರ್ತ ಅನುಭವಗಳನ್ನು ದಾಖಲಿಸುತ್ತಾರೆ. ಕುವೆಂಪು ಅವರ 'ಆನಂದಮಯ ಜಗಹೃದಯ' ಮತ್ತು ಬೇಂದ್ರೆಯವರ 'ಮೂಡಲ ಮನೆಯ' ಕವಿತೆಗಳಲ್ಲಿ ಉದಾಹರಿಸಬಹುದು. ಆದರೆ ಮೊಗಸಾಲೆ ಅವರು ಪ್ರಕೃತಿಯನ್ನು ನೋಡಲು ಹೊರಡುವುದು ಅದರೊಳಗಿನ ಮನುಷ್ಯಪರ ಕಾಯಕ ಪ್ರವೃತ್ತಿಯನ್ನು ಗಮನಿಸುವ ಉದ್ದೇಶದಿಂದ

***"...ಸ್ಮಿತಾಳ ಎದೆ ಗೂಡಲ್ಲೂ***
***ಕಟ್ಟುತ್ತವೆ ಹಕ್ಕಿಗೂಡು***
***ಸಂಜೆ ಹೂಬಿಸಿಲಲ್ಲಿ ಅವಳು***
***ಮಡಿಕೆ ತುಂಬ ನೀರು ತುಂಬಿ***
***ಕೊಡವಾಗಿ ತುಳುಕುತ್ತಾ ಮನೆಯ ಹೊಸ್ತಿಲು ತುಳಿಯುವಾಗ***
***ಆಗುತ್ತಾಳೆ ಮತ್ಸ್ಯಗಂದಿ"*** [7]

[6]. ಮೊಗಸಾಲೆ, ನಾ. *ಪೂರ್ವೋಕ್ತ.* ಪುಟ.266

[7]. ಮೊಗಸಾಲೆ, ನಾ. *ಪೂರ್ವೋಕ್ತ.* ಪುಟ. 275

'ಮುಂಜಾನೆ' ಎಲ್ಲರಿಗೂ ರಮ್ಯವಾಗಿ ಕಾಣುವುದು ಒಂದು ದೃಷ್ಟಿಕೋನವಾದರೆ, ಅದೇ ಮುಂಜಾನೆಯಲ್ಲಿ ಕಾಯಕಜೀವಿಗಳ ಶ್ರಮವನ್ನು ಗುರುತಿಸುವುದು ವಿಶಿಷ್ಟವೆನಿಸುತ್ತದೆ. ಮೊಗಸಾಲೆಯವರಿಗೆ ಇಬ್ಬನಿ, ರವಿಕಿರಣಗಳು, ಹಸಿರಿನ ವೈಭವದೊಟ್ಟಿಗೆ 'ಬೀಡಿ ಕಟ್ಟುವ ಹುಡುಗಿ ಸ್ಮಿತಾ'ಳ ಕಾಯಕದ ಬದುಕು ಗೋಚರಿಸಿದೆ. ರೊಮ್ಯಾಂಟಿಕ್ ಕವಿಗಳ ಪಾಲಿಗೆ ವೈಭವಪೂರ್ಣವಾದ ಮುಂಜಾನೆ ನವ್ಯ ಮತ್ತ ನವ್ಯೋತ್ತರ ಕಾಲದವರಿಗೆ ಮನುಷ್ಯನ ಅಸ್ತಿತ್ವವನ್ನು ಕಂಡುಕೊಳ್ಳುವ ಮಾರ್ಗವಾಗಿದೆ. ಮೊಗಸಾಲೆಯವರಂತೆ ಆಲನಹಳ್ಳೀ ಕೃಷ್ಣ ಅವರ 'ಬೆಳಗು' ಕವಿತೆಯಲ್ಲಿ ಹಳ್ಳಿಯ ಕಾಯಕವರ್ಗಗಳ ಬದುಕಿನ ವಾಸ್ತವತೆಯ ಚಿತ್ರಣಗಳಿವೆ.

*"ಬೆಳ್ಳಿ ಮೊಲವ*
*ನನ್ನ ಮನೆ ಧಾಂಡಿಗ ನಾಯಿ ಗಬಕ್ಕನೆ*
*ಕಚ್ಚಿ ಕಿತ್ತಳೆದೊಡನೆ ರಕ್ತ ಚೆಲ್ಲೆಂದಾಗ*
*ನನ್ನೂರಿನಲ್ಲಿ ಬೆಳಗಾಯಿತು"* [8]

ಹಳ್ಳಿಯ ಮಣ್ಣಿನಿಂದ ಮೂಡಿರುವ ಐದು ಚಿತ್ರಗಳನ್ನು ಒಳಗೊಂಡ ಆಲನಹಳ್ಳಿ ಕೃಷ್ಣ ಅವರ 'ಬೆಳಗು' ಕವಿತೆಯ ನಾಲ್ಕು ಸಾಲ್ಗಳಿವು. ಕೃಷ್ಣ ಅವರಿಗೆ ಬೆಳಗಿನಲ್ಲಿ ಮಾಂಸವನ್ನು ತೂಗು ಹಾಕಿದ್ದ ಮಾಂಸದಂಗಡಿ, ವೈದಿಕರ ಮಗಳು ಕದ್ದು ಓಡುವ ದೃಶ್ಯ, ಮೊಲವ ಕೊಲ್ಲುವ ನಾಯಿಯ ಬೇಟೆ ಮತ್ತು ಶಾನುಭೋಗರ ಹಾದರನಗೆಯ ಚಿತ್ರಣಗಳು ಕಾಣಿಸುತ್ತವೆ. ಶೂದ್ರ ಪರಿಕಲ್ಪನೆಯನ್ನು ಪ್ರಕೃತಿಯ ಮೂಲಕ ನಿರೂಪಿಸುವ ಕೃಷ್ಣ ಅವರ ವಿಶಿಷ್ಟ ನೋಟ ಗಮನಸೆಳೆಯುವಂತದ್ದು. ಮೊಗಸಾಲೆಯವರು ಕೂಡ ಕರಾವಳಿಯ ಮುಂಜಾನೆಯಲ್ಲಿ ಬೀಡಿ ಕಟ್ಟುವ ಸ್ಮಿತಾಳ ಶ್ರಮವನ್ನ, ಕುಡುಕ ಅಪ್ಪನ ಉಪಟಳವನ್ನ, ತಾಯಿ ಜಲಜಮ್ಮನ ದುಡಿಮೆಯನ್ನ ಗುರುತಿಸಿದ್ದಾರೆ. ಮಡಿಕೆ ನೀರು ತುಂಬಿದ ಕೊಡವನ್ನು ಹೂಬಿಸಿಲಲ್ಲಿ ಹೊತ್ತು ಬರುವ ಸ್ಮಿತಾಳು ಕವಿಗೆ 'ಮತ್ಸ್ಯಗಂಧಿ'ಯಾಗಿ ಕಾಣುತ್ತಾಳೆ. ಕರಾವಳಿಯ ದುಡಿಯುವ ವರ್ಗವನ್ನು 'ಸ್ಮಿತಾ'ಳ ಕುಟುಂಬದ ಕಾಯಕದ ಮೂಲಕ ನಿರೂಪಿಸಲು ಹೊರಟಿರುವ ಮೊಗಸಾಲೆಯವರು ನಿಸರ್ಗವೆಂಬುದು ಮನುಷ್ಯನ ಜೀವನೋತ್ಸಾಹದ ತಳಹದಿ ಎಂಬುದನ್ನು ದೃಶ್ಯಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. 'ಕರಾವಳಿಯ ಮುಂಗಾರು' ತರುವ ಸಂಭ್ರಮ ಮತ್ತು ಪ್ರಕೃತಿಯ ಬದಲಾವಣೆಗಳನ್ನು ಕೂಡ ಕವಿ ಚಿತ್ರಿಸಿದ್ದಾರೆ.

*'ಕರಾವಳಿಯ ಮುಂಗಾರು*
*ನಮ್ಮ ನಿಮ್ಮ ಹಾಗಲ್ಲ*
*ಸದಾ ಮುಖ ಗಂಟಿಕ್ಕಿ*
*ನೋಡಿದ ಹಾಗೆ ನೆಲವ*
*ಅಥವಾ ಆಗಾಗ ಆಕಾಶವ'* [9]

ಕವಿಗಳು ತಾವು ಬದುಕುತ್ತಿರುವ ಭೌಗೋಳಿಕ ಪರಿಸರದ ಸಣ್ಣ ಸಣ್ಣ ಸಂಗತಿಗಳಲ್ಲಿರುವ ಜೀವಸೆಲೆಗಳನ್ನು ಗ್ರಹಿಸುವ ಸಂವೇದನಾಶೀಲತೆಯನ್ನು ಕಾಪಿಟ್ಟುಕೊಂಡಿರುತ್ತಾರೆ. ಪರಿಸರದ ಸೂರ್ಯೋದಯ, ಚಂದ್ರೋದಯ, ಮಳೆಗಾಲ, ಅರಣ್ಯ ವೈಭವಗಳೆಲ್ಲ ಮಣ್ಣಿನ ವೈವಿಧ್ಯತೆಗೆ ಅನುಗುಣವಾಗಿ ವಿಶಿಷ್ಟವಾಗಿರುವ ಸಂಗತಿಗಳನ್ನ ಆಯಾ ನೆಲದ ಕವಿಗಳ ಕಾವ್ಯದಲ್ಲಿ ಅರಿತುಕೊಳ್ಳಬಹುದು. ಕುವೆಂಪು ಅವರು ಮಲೆನಾಡಿನಲ್ಲಿ ಸುರಿಯುವ ಜಡಿಮಳೆಯನ್ನು 'ವರ್ಷ ಭೈರವ'ನೆಂದು ಕರೆದಿದ್ದಾರೆ. ಮಲೆನಾಡಿನ ಮುಂಗಾರನ್ನು 'ಮಳೆಯಲ್ಲವಿದು, ಪ್ರಳಯದ ಆವೇಶ'ವೆಂದು ಉದ್ಗರಿಸಿದ್ದಾರೆ. ಆದರೆ ಕರಾವಳಿಯ ಮುಂಗಾರಿಗೂ ಮಲೆನಾಡಿನ ಮುಂಗಾರಿನಷ್ಟೇ ಸಿಟ್ಟು, ಸೆಡವುಗಳಿವೆಯಾದರೂ 'ಬತ್ತಿಹೋದ ಮನಸ್ಸುಗಳಿಗೆ ನದಿಗಳಾಗಿ ಹರಿಯುವ ಉಕ್ಕು, ಸೊಕ್ಕು ಹಾಗೂ ಪುಳಕಗಳಿರುವುದನ್ನು ಮೊಗಸಾಲೆಯವರು ಭರವಸೆಯ ಹಾಡಾಗಿ ಚಿತ್ರಿಸಿದ್ದಾರೆ. ಪ್ರತಿ ಮನೆಗಳ ಹೊಸ್ತಿಲಿನವರೆಗೂ ಚಾಚುವ ಗದ್ದೆಯ ಪೈರುಗಳು

[8]. ಅರುಹು–ಕುರುಹು, ಕೃಷ್ಣ ಆಲನಹಳ್ಳಿ ಸಂದರ್ಶನ, ಏಪ್ರಿಲ್–ಜೂನ್ 2009, ಪುಟ–62

[9]. ಮೊಗಸಾಲೆ, ನಾ. *ಪೂರ್ವೋಕ್ತ.* ಪುಟ–276

ಕರಾವಳಿಯ ಪ್ರಾಕೃತಿಕ ಸೊಬಗನ್ನು ಹೆಚ್ಚಿಸುತ್ತವೆ. 'ಮಳೆಗಾಲ ಮತ್ತು ಬೇಸಿಗೆ ಕಾಲ'ಗಳನ್ನು ಪದ್ಯಗದ್ಯವೆಂದು ದಂಪತಿಗಳಿಬ್ಬರು ವಿಂಗಡಿಸಿಕೊಳ್ಳುವ ವಿಭಿನ್ನ ಶೈಲಿಯ ಕವಿತೆಯೊಂದು ಮೊಗಸಾಲೆಯವರ ಪ್ರಕೃತಿ ದರ್ಶನವನ್ನು ತೆರೆದು ತೋರುತ್ತದೆ.

***"ಮಳೆಗಾಲ ಅಂದರೆ ಕಾವ್ಯದ ಹಾಗೆ***
***ಅನ್ನುವ ಇವಳನ್ನು***
***ನಾನು ಮಳೆ ಎನ್ನುತ್ತೇನೆ ತಮಾಷೆಗೆ***
***ಬೇಸಗೆ ಅಂದರೆ ಗದ್ಯ***
***ಎನ್ನುವ ನನ್ನನ್ನು***
***ಇವಳು ಕವಿ ಎಂದು ಕೊಂಡಿದ್ದಾಳೆ"*** [10]

ಹೆಚ್.ಎಸ್.ರಾಘವೇಂದ್ರರಾವ್ ಅವರು ಕುವೆಂಪು ಅವರ ಕವಿತೆಗಳಲ್ಲಿ 'ಪ್ರಕೃತಿ' ಚಿತ್ರಣಗಳನ್ನು ಕುರಿತು ಮಾತನಾಡುವಾಗ ಕುವೆಂಪು ಅವರು "ಪ್ರಕೃತಿಯನ್ನು ಸ್ತ್ರೀಲಿಂಗದಲ್ಲಿ ಸಂಬೋಧಿಸಿರುವುದು"[11] ಗಮನೀಯವಾದ ಸಂಗತಿಯೆಂದು ವ್ಯಾಖ್ಯಾನಿಸಿದ್ದಾರೆ. ಮೊಗಸಾಲೆಯವರ ಪ್ರಕೃತಿ ಚಿತ್ರಣಗಳಲ್ಲಿಯೂ ಸ್ತ್ರೀ–ಪುರುಷವೆನ್ನುವ ಸಂಬೋಧನೆಗಳಿವೆ. 'ಮಳೆ'ಯನ್ನ ಪದ್ಯವೆಂತಲೂ, ಬೇಸಿಗೆಯನ್ನು 'ಗದ್ಯ'ವೆಂತಲೂ ಕರೆದುಕೊಳ್ಳುವ 'ಋತು'ವಿನ ಮಾನದಂಡವನ್ನು ಮೊಗಸಾಲೆಯವರಲ್ಲಿ ಕಾಣಲಾಗಿದೆ. ಆದರೆ ಮಳೆಯಲ್ಲಿ ತಾಯ್ತನವನ್ನು, ಬೇಸಿಗೆಯಲ್ಲಿ ತಂದೆತನಗಳನ್ನು ಆರೋಪಿಸಿಕೊಳ್ಳುವ ವಿಶಿಷ್ಟ ಮಾದರಿಯನ್ನು ಗಮನಿಸಬಹುದು. ಬೇಸಿಗೆಯ ಒರಟುತನ ತಂದೆಯನ್ನ, ಮಳೆಗಾಲದ ಸಮೃದ್ಧತೆ ತಾಯ್ತನವನ್ನು ನೆನಪಿಸುತ್ತದೆ. "ಹರಿದ್ವರ್ಣದ ಹುಡುಗಿ ಭೂಮಿ!' ಎನ್ನುವ ಕವಿತೆಯಲ್ಲಿ ಕವಿ ಭೂಮಿಯನ್ನು 'ದ್ರೌಪದಿ' ಎಂದು ನಾಮಕರಣಗೊಳಿಸಿ, ಆಕೆಯ ಗಂಡಂದಿರು ಸೂರ್ಯ–ಚಂದ್ರರೆದು ನಿಶ್ಚಯಿಸಿದ್ದಾರೆ.

***"ದ್ರೌಪದಿಯ ಹಾಗೆ ಆಕೆ***
***ಮಡದಿಯಾಗಿ***
***ಸೂರ್ಯನಿಗೊಂದಷ್ಟು ಮಕ್ಕಳು ಹುಟ್ಟಿದವು***
***ಚಂದ್ರನಿಗೊಂದಷ್ಟು ಮಕ್ಕಳು ಆದುವು***
***ಹಗಲು ರಾತ್ರಿಯಾಗುತ್ತಿತ್ತು***
***ರಾತ್ರಿ ಹಗಲಾಗುತ್ತಿತ್ತು"*** [12]

ಇಡೀ ಪ್ರಕೃತಿಯನ್ನು 'ವಿಶ್ವಕುಟುಂಬ'ವಾಗಿ ನೋಡುವ ವಿಶಾಲತೆ ಈ ಕವಿತೆಗಿದೆ. ಮೊಗಸಾಲೆಯವರ 'ಕವಿ ಸಮಯ'ದಲ್ಲಿ ವಿಜ್ಞಾನವು ತೀರ ಸರಳವಾಗಿ ಮನುಷ್ಯನ ಮಗ್ಗುಲಿಗೆ ತಲುಪುವಂತಹ ಕಲಾತ್ಮಕತೆ ಸೃಷ್ಟಿಯಾಗಿದೆ. 'ಭೂಮಿ' ತಾಯಿಯಾಗಿ ತನ್ನ ಗಂಡುಮಕ್ಕಳಿಗೆ ಸೂರ್ಯನನ್ನು, ಹೆಣ್ಣು ಮಕ್ಕಳಿಗೆ ಚಂದ್ರನನ್ನು ತೋರಿಸುವಳು ಎಂದು ಕವಿ ವರ್ಣಿಸಿರುವಲ್ಲಿ ಚಂದ್ರನ ಬಗೆಗೆ ಹೆಂಗಳೆಯರಲ್ಲಿ ಇರುವ ಪ್ರೇಮ ವ್ಯಕ್ತವಾಗಿದೆ. ಆದರೆ ಸೂರ್ಯನು ಚುಂಬಿಸಲು ಬಿಡಲೊಲ್ಲದ 'ಭೂಮಿ', ಚಂದ್ರನನ್ನು ಮನಸಾರೆ ಒಪ್ಪುವವಳು ಎಂದು ಕವಿ ವರ್ಣಿಸುವಾಗ ಚಂದ್ರೋದಯ ಸೌಂದರ್ಯಕ್ಕೆ ಹೆಣ್ಣಿನ ಎದೆ ತೆರೆದುಕೊಳ್ಳುತ್ತದೆ ಎನ್ನುವ ಸಂಗತಿಯನ್ನ ವೈಭವೀಕರಿಸಿದಂತೆ ಕಾಣುತ್ತದೆ. ಚೆನ್ನವೀರ ಕಣವಿಯವರ 'ಹೂವು ಹೊರಳುವವು' ಎನ್ನುವ ಕವಿತೆಯನ್ನಿಲ್ಲಿ ಪ್ರಸ್ತಾಪಿಸಬಹುದು.

***"ಹೂವು ಹೊರಳುವವು ಸೂರ್ಯನ ಕಡೆಗೆ***
***ನಮ್ಮ ದಾರಿ ಬರಿ ಚಂದ್ರನವರೆಗೆ"***[13]

ಕರಾವಿಯವರು ಚಂದ್ರನು ಸ್ವಯಂ ಪ್ರಭೆಯಲ್ಲ, ಆತ ಬೆಳಕಿಗಾಗಿ ಸೂರ್ಯನನ್ನು ಅವಲಂಬಿಸುತ್ತಾನೆ ಎನ್ನುವ ವೈಜ್ಞಾನಿಕ ವಿಚಾರಧಾರೆಯನ್ನು ಈ ಸಾಲುಗಳಲ್ಲಿ ಒಡಮೂಡಿಸಿದ್ದಾರೆ. ಇಲ್ಲಿ 'ನಮ್ಮ ದಾರಿ ಚಂದ್ರನವರೆಗೆ' ಮಾತ್ರ ಎನ್ನುವುದರಲ್ಲಿ ಚಂದ್ರನಂತೆ ನಾವುಗಳು ಪರಾವಲಂಬಿಗಳು ಅಥವಾ ಅಧೀನರು ಎಂಬ ತಿಳಿವು ಇದೆ. ಅಂದರೆ ನಮ್ಮೊಳಗಿನ ಸ್ವಂತಿಕೆ

---

[10]. ಮೊಗಸಾಲೆ, ನಾ. *ಪೂರ್ವೋಕ್ತ.* ಪುಟ. 278
[11]. ಹೆಚ್.ಎಸ್.ಆರ್. *ಹಾಡೆ ಹಾದಿಯ ತೋರಿತು.* ಪುಟ.223.
[12]. ಮೊಗಸಾಲೆ, ನಾ. *ಪೂರ್ವೋಕ್ತ.* ಪುಟ.279
[13]. ಚೆನ್ನವೀರ ಕಣವಿ. *ಹೊಂಬೆಳಕು.* ಪುಟ.615

ಅಥವಾ ಸ್ವಯಂಪ್ರಭೆಯ ಗುಣವನ್ನ ಅರಿತು ಸೂರ್ಯನಂತಾಗಬೇಕೆನ್ನುವ ಸಂದೇಶವಿದೆ. ಮೊಗಸಾಲೆಯವರು ಕೂಡ ತಮ್ಮ ಕವಿತೆಯಲ್ಲಿ ಇಡೀ ಭೂಮಿಯೇ ಚಂದ್ರನ ಬೆಳದಿಂಗಳ ಕಡೆಗೆ ವಾಲುತ್ತಿರುವುದರ ಬಗೆಗೆ ವಿವೇಚನೆಯಿದೆ. ಇದು ನಿಸರ್ಗವನ್ನು ವೈಚಾರಿಕ ದೃಷ್ಟಿಯಲ್ಲಿ ಪರಿಭಾವಿಸುವುದು ಕ್ರಮವಾಗಿದೆ.

**ಆಕರಗ್ರಂಥ**


- ಮೊಗಸಾಲೆ, ನಾ. (2020). *ನೀಲ ಆಕಾಶ.* ಸ್ನೇಹ ಎಂಟರ್‌ಪ್ರೈಸಸ್.


**ಪರಾಮರ್ಶನ ಗ್ರಂಥಗಳು**


- ಜನಾರ್ಧನ್ ಭಟ್, ಬಿ. (2021). *ಕರಾವಳಿಯ ಕವಿರಾಜಮಾರ್ಗ.* ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ.
- ಜನಾರ್ಧನ್ ಭಟ್. (ಸಂ.)., ಪಣಿಯೂರ ಕರುಣಾಕರಶೆಟ್ಟಿ. (ಲೇ.). (2018). *ಮೊಗಸಾಲೆಗೆ ಪ್ರವೇಶ.* ಸೃಜನ ಪ್ರಕಾಶನ.
- ನಾಗರಾಜ್, ಡಿ.ಆರ್. (2015). *ಶಕ್ತಿಶಾರದೆಯ ಮೇಳ (ಆಧುನಿಕ ಕನ್ನಡ ಕಾವ್ಯದ ಅಧ್ಯಯನ).* ಅಕ್ಷರ ಪ್ರಕಾಶನ.
- ರಾಘವೇಂದ್ರರಾವ್, ಹೆಚ್.ಎಸ್. (2021). *ಹಾಡೆ ಹಾದಿಯ ತೋರಿತು.* ಕಾಮಧೇನು ಪುಸ್ತಕ ಭವನ.